

## ಜಯಾ ಎಸ್. ಕುಮಟಾಕರ್

ತಮ್ಮ ಮೊದಲ ಕಥಾಸಂಕಲನ 'ಆಕಾಶಕ್ಕೊಂದು ಏಣಿ'(2002)ಯ ಮೂಲಕ ಹೊಸ ಭರವಸೆ ಮೂಡಿಸಿದ್ದ ಅನುಜಯಾ ಎಸ್. ಕುಮಟಾಕರ್ ಉತ್ತರ ಕನ್ನಡದ ಶಿರಸಿಯವರು. ಆರಂಭದಲ್ಲಿ ಜಯಾ ಎಸ್. ಕುಮಟಾಕರ್ ಹೆಸರಿನಲ್ಲಿ ಬರೆಯುತ್ತಿದ್ದ ಅವರು ಮುಂದೆ ಅನುಜಯಾ ಎಸ್. ಕುಮಟಾಕರ್ ಎಂಬ ಹೆಸರಿನಲ್ಲೇ ಬರೆಯತೊಡಗಿದರು. ಕನ್ನಡ ಎಂ.ಎ ಪದವೀಧರೆಯಾದ ಅವರು ಮುಂದೆ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಮಾಡುತ್ತಲೇ ಪತ್ರಿಕೆಗಳಲ್ಲೂ ಕೆಲಕಾಲ ಕೆಲಸ ಮಾಡಿದ್ದರು.

ಕನ್ನಡದ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಕತೆ, ಕವನಗಳನ್ನು ಪ್ರಕಟಿಸುತ್ತಿದ್ದ ಅನುಜಯಾ 2004ರ ಸುಮಾರಿಗೆ ತಮ್ಮ ಕ್ರಿಯಾಶೀಲ ಬರವಣಿಗೆಯನ್ನು ನಿಲ್ಲಿಸಿದರು. ಐವತ್ತಕ್ಕೂ ಹೆಚ್ಚು ಕತೆಗಳನ್ನು, ನೂರಕ್ಕೂ ಹೆಚ್ಚು ಕವಿತೆಗಳನ್ನು ಬರೆದಿರುವ ಅವರು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು ಒಂದು ಸಂಕಲನವನ್ನು ಮಾತ್ರ.

ಮಧ್ಯಮವರ್ಗದ ಪಾತ್ರಗಳನ್ನು, ಕೌಟುಂಬಿಕತೆಯನ್ನು, ಮನುಷ್ಯ ಸಂಬಂಧದ ಸೂಕ್ಷ್ಮ ಎಳೆಗಳನ್ನು ಪ್ರಬುದ್ಧವಾಗಿ ಕತೆಯಾಗಿ ನೇಯುತ್ತಿದ್ದ ಅನುಜಯಾ ಕತೆಗಳಲ್ಲಿ ಹೊಸತನವಿರುತ್ತಿತ್ತು. ಇವರ ಕತೆಗಳು ಇವರು ಮುಂದೆ ಕನ್ನಡದ ಮಹತ್ವದ ಕತೆಗಾರ್ತಿಯಾಗುವ ಭರವಸೆಯನ್ನು ಮೂಡಿಸಿದ್ದವು. ''...ತಮ್ಮ ಕತೆಗಳನ್ನು ತೀರ fuss ಮಾಡಿ ಮುಗಿಸುವುದಿಲ್ಲ. ಒಂಥರಾ ಸಂಕ್ಷಿಪ್ತತೆಯಲ್ಲೇ ಕತೆಯನ್ನು ಹಸಿಯಾಗೇ ಬಿಡುತ್ತಾರೆ, 'ಈ ಕತೆ ಇನ್ನೂ ಮುಂದುವರಿಯುತ್ತದೆ, ಸದ್ಯಕ್ಕಿಲ್ಲಿ ನಿಲ್ಲಿಸೋಣ' –ಎನ್ನುವಂತೆ. ಇದು ಕತೆಯ ಅನುರಣನ ಸಾಮರ್ಥ್ಯಕ್ಕೆ ಇಂಬುಕೊಡುತ್ತದೆ.

...

ಅಪರೂಪದ ಕತೆಗಳನ್ನು ಒಳಗೊಂಡಿರುವ ಈ ಸಂಗ್ರಹ ಉತ್ಕೃಷ್ಟ ಪ್ರತಿಭೆಯೊಂದರ ಆಗಮನವನ್ನು ಸಾರುತ್ತಿದೆ. ಇಲ್ಲಿಯ ಪ್ರತಿ ಕತೆಗೂ ಅದರದ್ದೇ ಆದ ಒಂದು ವಾತಾವರಣ ಇದೆ. ಇಲ್ಲಿಯ ಬಹುತೇಕ ಕಥೆಗಳ ಗೆಲುವು ಅವುಗಳ ಜೀವಂತ ಸೌಷ್ಟವಗಳಲ್ಲಿವೆ. ಇದು ಕತೆಗಾರ್ತಿಯ ತೀವ್ರವಾದ ಅವಲೋಕನದಿಂದ ಮತ್ತು ಬದುಕಿನ ಕುರಿತಾದ ರುಚಿಯಿಂದಷ್ಟೇ ಸಾಧ್ಯವಾಗಬಹುದಾದದ್ದು'' ಎನ್ನುತ್ತಾರೆ 'ಆಕಾಶಕ್ಕೊಂದು ಏಣಿ'ಗೆ ಬರೆದಿರುವ ಮುನ್ನುಡಿ 'ಕಂಪನ ವಿಸ್ತಾರ'ದಲ್ಲಿ ಕತೆಗಾರ ಜಯಂತ ಕಾಯ್ಕಿಣಿ.

ಚೆಲುವನ್ನು ವಿವಿಧ ಕೋನಗಳಲ್ಲಿ ನೋಡಿಕೊಂಡು ಒಳ ಕೋಣೆಯಲ್ಲೆಲ್ಲೋ ನಮಾಜಿಗೆ ಕುಳಿತಿದ್ದ ಅಜ್ಜಿಯ ನಮಾಜು ಮುಗಿಯುವ ತನಕ ಕಾದು ನಿಂತಿದ್ದಳು.

''ಅಜ್ಜಿ, ನೋಡು ಸಜೀದ್ ಕಳಿಸಿದ ಸೀರೆ... ಹೇಗೆ ಕಾಣ್ತೇನಿ ನಾನಿದರಲ್ಲಿ?'' ಮುದ್ದಾಗಿ ಕೇಳುತ್ತ ಬೇಕೆಂದೇ ಬಳಕುತ್ತ ನಿಂತವಳನ್ನು ಕಣ್ತುಂಬ ನೋಡುತ್ತ ಶಾಹೆನಾಳ ಅಜ್ಜಿ ಅರೆಗಳಿಗೆ ಮೌನವಾಗಿದ್ದುಬಿಟ್ಟರು. ಶಾಹೆನಾಳ ಅಬ್ಬು ಆಗ ತಾನೇ ಬಂದವರು ಕಾಲಲ್ಲಿನ ಚಪ್ಪಲಿ ಬಿಡುತ್ತಿದ್ದಂತೇ ಶಾಹೆನಾಳಿಗೆ ಹೊರ ಜಗುಲಿಗೇ ಓಡಿ ಬಂದು ಅಬ್ಬುವಿನ ಮುಂದೆ ನಿಲ್ಲುವ ತವಕ. ಆದರೆ ಇಂದು ಅಪ್ಪನ ಜೊತೆಗೇ ಅವಳ ಮಾವ ಬಂದಿದ್ದ ಸಾಗರದಿಂದ. ಮಾವ ತಂಗಿಯ ಮನೆಗೆಂದೋ ನೆಂಟರ ಮನೆಗಳಿಗೋ ಹೋಗುವುದೇ ಅಪರೂಪ. ಆರಾಮವಾಗಿ ಕುಳಿತು ಊಟ ಮಾಡಲೂ ಕೆಲಬಾರಿ